# ವಿರುದ್ಧಾರ್ಥಕ ಪದಗಳ ಬೋಧನೆ | ನನ್ನ ತರಗತಿಯ ಕಾರ್ಯತಂತ್ರ

ಮೊಂಪಾ ಘೋಷಾಲ್

ನಾನು ಮೂರನೇ ತರಗತಿಯಲ್ಲಿದ್ದಾಗ ಶಿಕ್ಷಕರು ನಮಗೆ ವಿರುದ್ಧಾರ್ಥಕ ಪದಗಳ ಪಟ್ಟಿಯನ್ನು ಕೊಟ್ಟು ಅವುಗಳ ಅರ್ಥಗಳನ್ನು ತಿಳಿಸಿ, ನೆನಪಿಟ್ಟುಕೊಳ್ಳುವಂತೆ ಹೇಳುತ್ತಿದ್ದುದು ನೆನಪಿದೆ. ಮರುದಿನ ವಿದ್ಯಾರ್ಥಿಗಳು ಅವುಗಳನ್ನು ಕಲಿತಿದ್ದಾರೋ ಇಲ್ಲವೋ ಎಂದು ಅವರು ಪ್ರಶ್ನೆ ಕೇಳುತ್ತಿದ್ದರು. ಯಾವುದೇ ಉದಾಹರಣೆ ಅಥವಾ ಚಿತ್ರ ಮನಸ್ಸಿನಲ್ಲಿ ಇಲ್ಲದಿದ್ದರೆ ಅದನ್ನು ಕಲಿಯುವುದು ಎಷ್ಟು ಕಷ್ಟವಾಗುತ್ತಿತ್ತು ಎಂಬುದನ್ನು ನಾನು ನೆನಪಿಸಿಕೊಳ್ಳುತ್ತೇನೆ. ಹಾಗಾಗಿ ಈ ವಿರುದ್ಧಾರ್ಥ ಪದಗಳನ್ನು ಕಲಿಯುವ ಸಂದರ್ಭದಲ್ಲಿ ನನ್ನ ತರಗತಿಯಲ್ಲಿ ಆದ ಒಂದು ಅನುಭವವನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಬಯಸುತ್ತೇನೆ. ಈ ಹಿಂದೆ ಮಾತೃಭಾಷೆಯನ್ನು ಹೊರತುಪಡಿಸಿ ಇನ್ನೊಂದು ಭಾಷೆಯನ್ನು ಕಲಿಯುವ ಅವಕಾಶ ಮಕ್ಕಳಿಗೆ ಸಿಗದೇ ಹೋಗಿದ್ದರೂ ಕೂಡ, ಅದನ್ನು ಕಲಿಯಲು ಸಾಧ್ಯವಿದೆ ಎಂಬುದು ನನ್ನ ಅಭಿಪ್ರಾಯವಾಗಿದೆ. ಹೊಸದನ್ನು ಕಲಿಸಲು ಶಿಕ್ಷಕರಾದ ನಾವು ಈಗಾಗಲೇ ನಮ್ಮಲ್ಲಿರುವ ಜ್ಞಾನವನ್ನು ಬಳಸಿಕೊಂಡರೆ, ಪ್ರತಿಯೊಂದು ಮಗುವೂ ಕೂಡ ಕಲಿಯುವ ಸಾಮರ್ಥ್ಯ ಹೊಂದಿರುತ್ತದೆ.

ಉದಾಹರಣೆಗೆ, ನಾನು ಎರಡನೇ ತರಗತಿಗೆ ವಿರುದ್ಧಾರ್ಥಕ (Opposites) ಪದಗಳನ್ನು ಹೇಳಿಕೊಡುತ್ತಿದ್ದೆ. 'ವಿರುದ್ಧಾರ್ಥಕ ಪದಗಳು ಎಂದರೆ ಏನು?' ಎಂದು ಕೇಳುವ ಮೂಲಕ ನನ್ನ ತರಗತಿಯನ್ನು ಆರಂಭಿಸಿದೆ. ಇದರ ಅರ್ಥ ನಮಗೆ ತಿಳಿದಿಲ್ಲ ಎಂದು ವಿದ್ಯಾರ್ಥಿಗಳು ಹೇಳಿದರು. ನಾನು ಅವರಿಗೆ ಆನೆ ಮತ್ತು ಇಲಿಯ ಚಿತ್ರಗಳನ್ನು ತೋರಿಸಿ ದೊಡ್ಡದು ಹಾಗೂ ಚಿಕ್ಕದು ಎಂಬುದಕ್ಕೆ ಉದಾಹರಣೆ ಕೊಟ್ಟೆ. 'ಇವೆರಡೂ ಗಾತ್ರದಲ್ಲಿ ಒಂದೇ ರೀತಿಯಿವೆಯಾ?' ಎಂದು ನಾನು ಅವರಿಗೆ ಕೇಳಿದೆ. 'ಇಲ್ಲ, ಆನೆ ದೊಡ್ಡದು ಮತ್ತು ಇಲಿ ಚಿಕ್ಕದು' ಎಂದರು.

"ಹೌದು, ಆನೆ ದೊಡ್ಡದು, ಇಲಿ ಚಿಕ್ಕದು. ಈ ದೊಡ್ಡದು ಮತ್ತು ಚಿಕ್ಕದಕ್ಕೆ ಇನ್ನೂ ಕೆಲವು ಉದಾಹರಣೆಗಳನ್ನು ಕೊಡುವಿರಾ?" ಎಂದು ನಾನು ಮಕ್ಕಳನ್ನು ಕೇಳಿದೆ. ಅವರು ಅದಕ್ಕೆ ಹಸು-ನಾಯಿ, ನಾಯಿ-ಬೆಕ್ಕು, ಕುದುರೆ-ನಾಯಿ ಇತ್ಯಾದಿ ಉದಾಹರಣೆಗಳನ್ನು ಕೊಟ್ಟರು.

ಆ ಬಳಿಕ ನಾನು ಒಂದು ತೆಂಗಿನ ಮರ ಮತ್ತು ಗುಲಾಬಿ ಹೂವಿನ ಗಿಡದ ಚಿತ್ರಗಳನ್ನು ತೋರಿಸಿ ಎತ್ತರ ಮತ್ತು ಗಿಡ್ಡ ಪದಗಳಿಗೆ ವಿವರಣೆಗಳನ್ನು ನೀಡಿದೆ ಮತ್ತು ಅವರ ಅನುಭವದಿಂದ ಇನ್ನಷ್ಟು ಇಂಥ ಉದಾಹರಣೆಗಳನ್ನು ಕೊಡುವಂತೆ ಅವರಿಗೆ ಹೇಳಿದೆ. ಆಗ ಮಕ್ಕಳು ಎತ್ತರ ಹಾಗೂ ಗಿಡ್ಡವಿರುವ ತಮ್ಮ ಸಹಪಾಠಿಗಳು ಮತ್ತು ಶಿಕ್ಷಕರನ್ನು ಗುರುತಿಸುವ ಮೂಲಕ ಎತ್ತರ ಮತ್ತು ಗಿಡ್ಡ ಪರಿಕಲ್ಪನೆಯನ್ನು ಅರ್ಥ ಮಾಡಿಕೊಳ್ಳಲು ಶುರು ಮಾಡಿದರು.

ಮರುದಿನ ನಾನು ತರಗತಿಯನ್ನು ಪ್ರವೇಶಿಸಿದಾಗ, ದೊಡ್ಡದು ಮತ್ತು ಚಿಕ್ಕದು, ಉದ್ದ ಮತ್ತು ಗಿಡ್ಡ ಪದಗಳಿಗೆ ಅಪ್ಪ-ಅಮ್ಮ, ಟೀಚರ್ ಮತ್ತು ನಾನು ಹಾಗೂ ದೊಡ್ಡದು ಮತ್ತು ಸಣ್ಣದಕ್ಕೆ ಕೊಠಡಿ ಮತ್ತು ಗೊಂಬೆ, ಶಾಲಾ ಕಟ್ಟಡ ಮತ್ತು ಗೊಂಬೆ-ಹೀಗೆ ಅನೇಕ ಉದಾಹರಣೆಗಳನ್ನು ಕೊಡಲಾರಂಭಿಸಿದರು. ನಿನ್ನೆ ತರಗತಿಯಲ್ಲಿ ನಾನು ಹೇಳಿದ ಪದಗಳ ಬಗೆಗೆ ಮಕ್ಕಳು ಇನ್ನೂ ಹೆಚ್ಚಿನ ಉದಾಹರಣೆಗಳನ್ನು ಯೋಚಿಸಿದ್ದಾರೆ ಎಂಬುದು ನನಗೆ ಅರಿವಾಯಿತು. ನಾವು ಗಟ್ಟಿ ಮತ್ತು ಮೃದು (ಮರ ಮತ್ತು ಹತ್ತಿ) ಪದಗಳೊಂದಿಗೆ ಇದನ್ನು ಮುಂದುವರಿಸಿದೆವು. ಮಕ್ಕಳು ಹತ್ತಿಯನ್ನು ಮುಟ್ಟಿ ಇದು ಮೃದು ಮತ್ತು ಮರದ ತುಂಡನ್ನು ಸ್ಪರ್ಶಿಸಿ ಇದು ಗಟ್ಟಿ ಎಂದರು. ಆ ಬಳಿಕ ಮಕ್ಕಳು ಚಾಕ್ ಮತ್ತು ಡಸ್ಟರ್ ಸೇರಿದಂತೆ ಅನೇಕ ಉದಾಹರಣೆಗಳನ್ನು ನೀಡಿದರು. 'ಡಸ್ಟರ್ ಗಟ್ಟಿ, ಚಾಕ್ ಮೃದು' ಎಂಬುದಾಗಿ ಅವರು ವಿವರಿಸಿದರು.

ನಾವು ಈ ಚಟುವಟಿಕೆಗಳನ್ನು ಸಣ್ಣಸಣ್ಣ ಗುಂಪುಗಳಲ್ಲಿ ಮುಂದುವರಿಸಿದೆವು. ಇದರಿಂದಾಗಿ ತರಗತಿಯಲ್ಲಿ ಸಾಮಾನ್ಯವಾಗಿ ಸಕ್ರಿಯವಾಗಿರದ ಮಕ್ಕಳೂ ಕೂಡ ಈ ಚಟುವಟಿಕೆಯಲ್ಲಿ ಆಸಕ್ತರಾಗಿ ತಮಗೆ ಕೊಟ್ಟ ಶೀಟ್‌ನಲ್ಲಿ ಬರೆಯಲು ಶುರು ಮಾಡಿದರು ಮತ್ತು ಉತ್ತಮ ಉದಾಹರಣೆಗಳನ್ನು ಕೊಡಲು ಸಾಕಷ್ಟು ಪ್ರಯತ್ನಿಸಿದರು. ಅವರಿಂದ ಅತ್ಯುತ್ತಮ ಉದಾಹರಣೆಗಳು ಬಂದವು. ಇಂತಹ ಒಂದು ಪ್ರಯೋಗ ಮಕ್ಕಳು ಇಡೀ ಪರಿಕಲ್ಪನೆಯನ್ನು ದೃಢವಾಗಿ ಅರ್ಥ ಮಾಡಿಕೊಳ್ಳುವಂತೆ ಹಾಗೂ ಅದು ಅವರ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿಯುವಂತೆ ಮಾಡಿತು.

ಈಗ ಮೂರನೇ ತರಗತಿಯಲ್ಲಿರುವ ಈ ಮಕ್ಕಳು ವಿರುದ್ಧಾರ್ಥಕ ಪದಗಳನ್ನು ಈಗಲೂ ನೆನಪಿನಲ್ಲಿಟ್ಟುಕೊಂಡಿದ್ದಾರೆ ಮತ್ತು ಯಾವಾಗ ಕೇಳಿದರೂ ಯೋಚನೆ ಮಾಡದೇ ತಕ್ಷಣ ಸರಿಯಾದ ಉತ್ತರವನ್ನೇ ಹೇಳುತ್ತಾರೆ.

ಹಾಗಾಗಿ, ಯಾವುದೇ ವಿಷಯವನ್ನು ನಾವು ನಿರ್ವಹಿಸುವ ಸಂದರ್ಭದಲ್ಲಿ, ಅದರಲ್ಲೂ ವಿಶೇಷವಾಗಿ ಪರಿಕಲ್ಪನಾತ್ಮಕ ತಿಳುವಳಿಕೆಗೆ ಸಂಬಂಧಿಸಿದ ವಿಷಯಗಳಲ್ಲಿ ನಾವು ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವ ಕೆಲಸವನ್ನು ಮಾಡಬೇಕಾಗುತ್ತದೆ. ಇದರಿಂದ ಅವರು ವಿಷಯದ ಬಗೆಗೆ ತೀವ್ರವಾದ ಆಸಕ್ತಿಯನ್ನು ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ ಮತ್ತು ಕಂಠಪಾಠದ (Mugging) ದಾರಿಯನ್ನು ಬಿಟ್ಟು ಆಳವಾಗಿ ಪರಿಕಲ್ಪನೆಯನ್ನು ಅರ್ಥ ಮಾಡಿಕೊಳ್ಳುತ್ತಾರೆ ಎಂಬುದು ನನ್ನ ಭಾವನೆ.



**ಪೊಂಪಾ** ಅವರು 2016ರ ಏಪ್ರಿಲ್‌ನಿಂದ ಧಮ್‌ತರಿಯ ಅಜೀಂ ಪ್ರೇಮ್‌ಜಿ ಶಾಲೆಯಲ್ಲಿ ಶಿಕ್ಷಕಿಯಾಗಿದ್ದಾರೆ. ಅವರು ಗಣಿತದಲ್ಲಿ ತಮ್ಮ ಪದವಿಯನ್ನು ಪೂರ್ಣಗೊಳಿಸಿದ್ದು, ಇಂಗ್ಲಿಷ್ ಸಾಹಿತ್ಯದಲ್ಲಿ ಎಂ.ಎ. ಮತ್ತು ರಾಯ್‌ಪುರದ ರವಿಶಂಕರ್ ವಿಶ್ವವಿದ್ಯಾಲಯದಿಂದ ಬಿಎಡ್ ಪೂರ್ಣಗೊಳಿಸಿದ್ದಾರೆ. ಇದರ ಜೊತೆಗೆ ಅವರು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಓಪನ್ ಸ್ಕೂಲಿಂಗ್‌ನಿಂದ D.El.Ed ಪಡೆದಿದ್ದಾರೆ. 1997ರಲ್ಲಿ ಖಾಸಗಿ ಶಾಲೆಯಲ್ಲಿ ಶಿಕ್ಷಕ ವೃತ್ತಿಯನ್ನು ಆರಂಭಿಸಿದ ಅವರು ಗಣಿತ, ವಿಜ್ಞಾನ ಮತ್ತು ಇಂಗ್ಲಿಷ್ ಶಿಕ್ಷಕಿಯಾಗಿ ಅನೇಕ ಶಾಲೆಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಅವರಿಗೆ ಹೆಚ್ಚಿನ ಆಸಕ್ತಿ. ಅವರನ್ನು ಈ–ಮೇಲ್ ಮೂಲಕ ಸಂಪರ್ಕಿಸಬಹುದು: pompa.ghoshal@azimpremjifoundation.org

ಅನುವಾದ: **ಮಂಜುನಾಥ್ ಚಾಂದ್** । ಪರಿಶೀಲನೆ: **ನಾಗಮಣಿ ಎಸ್ ಎನ್**